# ಶ್ರೀಮದ್ ದೇವೀ ಭಾಗವತ ಮಹಾಪುರಾಣ - ಒಂದು ಒಳನೋಟ

**ಡಾ. ವಾಗೀಶ್ವರೀ ಶಿವರಾಮ**

ಭಾರತದಲ್ಲಿ ದೇವೀ ಉಪಾಸನೆಗೆ ಸಂಬಂಧಿಸಿದ ಅನೇಕ ಆಧಾರ ಗ್ರಂಥಗಳಲ್ಲಿ 'ದೇವೀಭಾಗವತ'ಕ್ಕೆ ಮಹತ್ವದ ಸ್ಥಾನವಿದೆ. ಮಾತೃ ಉಪಾಸಕರೆಲ್ಲರೂ ಓದಲೇಬೇಕಾದ ಈ ಕೃತಿಯನ್ನು ಪರಿಚಯ ಮಾಡಿಕೊಡುತ್ತ, ಅದರ ಹಲವು ವಿಶೇಷ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿರುವ ಅವರು ಮೂವತ್ತಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.



''ಇತಿಹಾಸ (ರಾಮಾಯಣ ಹಾಗೂ ಮಹಾಭಾರತ) ಪುರಾಣಗಳಿಂದ ವೇದದ ಅಂತರಾರ್ಥವನ್ನು ಚೆನ್ನಾಗಿ ತಿಳಿಯಬೇಕು'' (ಇತಿಹಾಸ-ಪುರಾಣಾಭ್ಯಾಂ ವೇದಾರ್ಥಂ ಸಮುಪಬೃಂಹಯೇತ್) ಎನ್ನುವುದು ಅನುಭಾವಿಗಳ ಮಾತು. ಆದ್ದರಿಂದ ಧರ್ಮದ ಸ್ವರೂಪವನ್ನು ತಿಳಿಯಲು ವೇದಗಳೇ ಮೂಲವಾದ್ದರಿಂದ (ಧರ್ಮೋಽಖಿಲೋ ವೇದಮೂಲಂ), ಅವುಗಳನ್ನು ಅರ್ಥೈಸಿಕೊಳ್ಳಲು ಪುರಾಣಗಳ ಅಧ್ಯಯನ ಅತ್ಯಗತ್ಯವಾಗಿದೆ. ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳು- ಪ್ರವಚನತ್ರಯಿಗಳೆಂದೇ ಪ್ರಸಿದ್ಧವಾಗಿದೆ. ಈ ಪ್ರವಚನತ್ರಯಿಗಳ ಮೂಲಕ ಸನಾತನ ಧರ್ಮ-ಸಂಸ್ಕೃತಿಗಳು, ಇಂದಿಗೂ ಜನಸಾಮಾನ್ಯರ ಮೇಲೆ ಪ್ರಭಾವ ಬೀರುತ್ತಿವೆ.

ಎರಡು ಭಾಗವತಗ್ರಂಥಗಳು ಪ್ರಸಿದ್ಧವಾಗಿವೆ-೧) ವಿಷ್ಣು (ಕೃಷ್ಣ) ಭಾಗವತ ಪುರಾಣ (ಅಣ್ಣ) ೨) ಶ್ರೀಮದ್ ದೇವೀ ಭಾಗವತ ಪುರಾಣ (ತಂಗಿ). ವ್ಯಾಸಪುತ್ರ ಶುಕಮುನಿಗಳು, ಪರೀಕ್ಷಿತನಿಗೆ (ಅಭಿಮನ್ಯುವಿನ ಮಗ) ಹೇಳಿದ್ದು ಕೃಷ್ಣಭಾಗವತ. ವ್ಯಾಸರು, ಪರೀಕ್ಷಿತಪುತ್ರ ಜನಮೇಜಯನಿಗೆ ಹೇಳಿದ್ದು-ದೇವೀ ಭಾಗವತ ಪುರಾಣ. ವಿಷ್ಣು, ಪರಬ್ರಹ್ಮಸ್ವರೂಪಿಯಾದರೆ - ದೇವಿ ಅವನ ಮಾಯಾಶಕ್ತಿ. ಈ ಎರಡು ಭಾಗವತ ಪುರಾಣಗಳಲ್ಲೂ ೧೮,೦೦೦ ಶ್ಲೋಕಗಳು, ೧೨ ಸ್ಕಂಧಗಳು ಹಾಗೂ ೩೧೮ ಅಧ್ಯಾಯಗಳಿವೆ. ಎರಡನ್ನೂ ವ್ಯಾಸರೇ ರಚಿಸಿದ್ದಾರೆ. ಶ್ರೀಮದ್ ಭಾಗವತ, ಹಾಗೂ ದೇವೀಭಾಗವತ ಒಂದೇ ತತ್ತ್ವದ ಎಡ-ಬಲ ಅಂಗಗಳು. ವಾಮಾಂಗ, ದಕ್ಷಿಣಾಂಗಗಳು ಸೇರಿ ಒಂದು ಶರೀರ ಪೂರ್ಣವಾಗುವಂತೆ, ಎರಡೂ ಪುರಾಣಗಳೂ ಒಂದೇ ತತ್ತ್ವವನ್ನು ತಿಳಿಸಿಕೊಡುತ್ತವೆ.

## ದೇವೀ ಭಾಗವತದ ಹಿರಿಮೆ-ಗರಿಮೆ

ದೇವೀಭಾಗವತ ಪುರಾಣ ಆಧ್ಯಾತ್ಮಿಕತೆ ಹಾಗೂ ಭಕ್ತಿಯ ವಿಶ್ವಕೋಶ. ಬದಲಾಗದ ಸತ್ಯ-ಪುರುಷ (ಪರಮಾತ್ಮ, ಪರಬ್ರಹ್ಮ) ಹಾಗೂ ಬದಲಾಗುತ್ತಿರುವ ಸತ್ಯ-ಪ್ರಕೃತಿ (ಆತ್ಮ, ಮಾಯೆ) ಎಂಬುದನ್ನು ಈ ಪುರಾಣ, ಅನೇಕ ದೇವೀ ಸಂಬಂಧವಾದ ಕಥೆಗಳಿಂದ ತಿಳಿಸಿಕೊಡುತ್ತದೆ. ದೇವತೆಗಳ, ರಾಕ್ಷಸರ ಯುದ್ಧದ ಮೂಲಕ, ಒಳ್ಳೆಯದರ-ಕೆಟ್ಟದರ ಸಂಘರ್ಷ ತಿಳಿಸುತ್ತದೆ. ಪರಬ್ರಹ್ಮನ ಸ್ತ್ರೀರೂಪದ ದಂತಕಥೆಗಳ ಮೂಲಕ ತತ್ತ್ವವನ್ನು ನೀಡುತ್ತದೆ. ದೇವಿಯು ಶಾಶ್ವತಸತ್ಯ ಎಂಬುದನ್ನು ಸಾರುತ್ತದೆ.

ದೇವೀ ಉಪನಿಷತ್, ತೈತ್ತಿರೀಯ ಉಪನಿಷತ್, ಮಾಂಡೂಕ್ಯ ಉಪನಿಷತ್ತಿನ ಸಾರಗಳಿಗೆ (೪, ೭ನೇ ಸ್ಕಂಧಗಳಲ್ಲಿ) ಈ ಭಾಗವತವು ಶಂಕರ, ಮಧ್ವ, ರಾಮಾನುಜರ ತತ್ತ್ವಗಳನ್ನು ಸಂಯೋಜಿಸುತ್ತದೆ. ಅಜ್ಞಾನದಿಂದ ಬಂಧನ, ಜ್ಞಾನದಿಂದ ಮೋಕ್ಷ; ಎಲ್ಲ ಸ್ತ್ರೀಯರೂ ದೇವಿಯ ರೂಪವೇ; ಭಕ್ತಿಯು ಜ್ಞಾನ, ಆನಂದ, ಮೋಕ್ಷಗಳಿಗೆ ಕಾರಣ — ಈ ವಿಚಾರಗಳನ್ನು ಎತ್ತಿ ಹಿಡಿಯುತ್ತದೆ. ದೇವೀ ಭಾಗವತ ಅಮೃತಕ್ಕಿಂತ ಮಿಗಿಲಾದುದು. ಅಮೃತಪಾನ ಮಾಡಿದವನಿಗೆ ಪುನರ್ಜನ್ಮವಿದೆ. ಆದರೆ ದೇವೀಭಾಗವತ ಶ್ರವಣದಿಂದ ಮುಕ್ತಿ ಸಿದ್ಧಿಸುತ್ತದೆ.

ದೇವಿಯು ತಾನೇ, ವೇದಸಾರವಾದ ಶ್ರೀಮದ್ ದೇವೀ ಭಾಗವತವನ್ನು ಪ್ರಳಯದಲ್ಲಿ ಆಲದ ಎಲೆಯ ಮೇಲೆ ಮಲಗಿದ ಶಿಶುರೂಪಿ ವಿಷ್ಣುವಿಗೆ (ಕೃಷ್ಣನಿಗೆ) ತಿಳಿಸಿದಳು. ತನ್ನ ತಂದೆಯಾದ ವಿಷ್ಣುವಿನಿಂದ ಉಪದೇಶ ಪಡೆದ ಬ್ರಹ್ಮನು, ಅದನ್ನು ೧೦೦ ಕೋಟಿ ಶ್ಲೋಕಗಳಿಂದ ಸಂಗ್ರಹಿಸಿ, ಪುತ್ರನಾದ ಶುಕನಿಗೆ ಉಪದೇಶಿಸಿದರು. ಹಾಗೂ ಪರೀಕ್ಷಿತ್ ಪುತ್ರ ಜನಮೇಜಯನಿಗೆ ದೇವೀಭಾಗವತವನ್ನು ಬೋಧಿಸಿದರು.

### ದೇವೀಭಾಗವತದ ಗರ್ಭದಲ್ಲಿನ ತಾತ್ತ್ವಿಕ ವಿಚಾರಗಳು

ದೇವಿಯನ್ನು ಸ್ತುತಿಸುವ ಒಂದು ಮಂಗಳಶ್ಲೋಕ, ಆಕೆಯ ಸ್ವರೂಪ ಹಾಗೂ ಮಾಹಾತ್ಮ್ಯೆಯನ್ನು ಹೀಗೆ ವರ್ಣಿಸುತ್ತದೆ:

**ಸೃಷ್ಟೌ ಯಾ ಸರ್ಗರೂಪಾ, ಜಗದವನವಿಧೌ ಪಾಲಿನೀ ಯಾ ಚ ರೌದ್ರೀ**
**ಸಂಹಾರೇ ಚಾಪಿ ಯಸ್ಯಾ ಜಗದಿದಮಖಿಲಂ ಕ್ರೀಡನಂ ಯಾ ಪರಾಖ್ಯಾ ।**
**ಪಶ್ಯಂತೀ ಮಧ್ಯಮಾಥೋ ತದನು ಭಗವತೀ ವೈಖರೀ ವರ್ಣರೂಪಾ**
**ಸಾಸ್ಮದ್ವಾಚಂ ಪ್ರಸನ್ನಾ ವಿಧಿ-ಹರಿ-ಗಿರಿಶಾರಾಧಿತಾಲಂಕರೋತು ॥**

''ಸೃಷ್ಟಿಶಕ್ತಿಯೂ, ಪಾಲನಾಶಕ್ತಿಯೂ, ರುದ್ರಶಕ್ತಿ ಸ್ವರೂಪಳೂ; ಈ ಸಂಪೂರ್ಣ ಜಗತ್ತನ್ನೇ ಆಟಿಕೆಯಾಗಿ ಉಳ್ಳವಳೂ; ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ವಾಣೀರೂಪದಲ್ಲಿ ಶೋಭಿಸುತ್ತಿರುವವಳೂ, ಹಾಗೂ ಬ್ರಹ್ಮವಿಷ್ಣು, ಶಂಕರರಿಂದ ಆರಾಧಿತಳೂ ಆದ ಭಗವತೀ ಆದಿಶಕ್ತಿಯು ಪ್ರಸನ್ನಳಾಗಿ ನಮ್ಮ ಮಾತನ್ನು ಅಲಂಕರಿಸಲಿ.''

ದೇವೀಭಾಗವತದ ಗರ್ಭದಲ್ಲಿರುವ ಕೆಲವು ಶ್ಲೋಕಗಳ ಮನನ, ಪುರಾಣವನ್ನು ಓದುವಾಗ ಹೊಂದಿರಬೇಕಾದ 'ಭಾವವನ್ನು' ತಿಳಿಸುತ್ತದೆ: *(೩.೬.೫೪)*

''ಹರಿ-ಹರರಲ್ಲಿ ಭೇದವಿಲ್ಲ. ಬ್ರಹ್ಮ, ವಿಷ್ಣು, ಮಹೇಶರಲ್ಲಿ ಭೇದ ಎಣಿಸುವವರು ದೇವೀಭಾಗವತ ಕೇಳಲು ಅನರ್ಹರು.''

**ಯಥಾ ಯಥಾ ಪೂರ್ವಮಹಂ, ಕರ್ಮ ತೇಷಾಂ ತಥಾ ತಥಾ ।**
**ಪ್ರೇರಯತ್ಯನಿಶಂ ಮಾಯಾ, ಪರಬ್ರಹ್ಮಸ್ವರೂಪಿಣೀ ॥**

*(೪.೨೫.೬೫)*

''ಪುನರ್ಜನ್ಮದಲ್ಲಿ ಅಹಂಕಾರಪೂರ್ವಕವಾಗಿ ಕರ್ಮವನ್ನು ಯಾರು ಮಾಡಿರುತ್ತಾರೋ, ಅವರನ್ನು ಕರ್ಮಗಳಿಗೆ ಅನುಗುಣವಾಗಿ ಪರಬ್ರಹ್ಮಸ್ವರೂಪಿಣಿಯಾದ ಮಾಯೆಯು (ದೇವಿಯು) ನಿರಂತರವಾಗಿ ಪ್ರೇರಿಸುತ್ತಾಳೆ.''

**ಅಹಂ ದೇವೀ ನ ಚಾನ್ಯೋಽಸ್ಮಿ, ಬ್ರಹ್ಮೈವಾಹಂ ನ ಶೋಕಭಾಕ್ ।**
**ಇತ್ಯಭೇದೇನ ತಾಂ ನಿತ್ಯಾಂ, ಚಿಂತಯೇತ್ ಜಗದಂಬಿಕಾಮ್ ॥**

*(೪.೨೫.೭೬)*

'' 'ನಾನು ದೇವಿಯ ಹೊರತು ಬೇರೊಬ್ಬನಲ್ಲ. ನಾನು ಬ್ರಹ್ಮವೇ ಸರಿ. ನನಗೆ ಯಾವ ಶೋಕವೂ ಇಲ್ಲ' - ಹೀಗೆ ಸಾಧಕನು ನಿತ್ಯಳಾದ ಜಗದಂಬಿಕೆಯಾದ ದೇವಿಯನ್ನು ಧ್ಯಾನಿಸಬೇಕು.''

ಮಹಾಪುರಾಣಗಳಲ್ಲಿರುವ ೫ ವಿಷಯಗಳು (ಲಕ್ಷಣಗಳು) ಈ ಪುರಾಣದಲ್ಲಿ ಪೂರ್ಣವಾಗಿ ಇವೆ:

**ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।**
**ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ ॥**

''೧. ಸೃಷ್ಟಿವಿಚಾರ (ಸರ್ಗಃ) ೨. ಬ್ರಹ್ಮನು ಮಾಡಿದ ಸೃಷ್ಟಿ (ಪ್ರತಿಸರ್ಗ), ೩. ರಾಜರ ವಂಶಾವಳಿ (ವಂಶಃ), ೪. ಮಹಾಪುರುಷರ ಜೀವನಚರಿತೆ (ವಂಶಾನುಚರಿತೆ) - ಎಂಬ ೫ ವಿಷಯಗಳು ವಿಸ್ತಾರವಾಗಿ ವರ್ಣಿತವಾಗಿವೆ.''

ಆದಿಶಕ್ತಿಯು (ಮೂಲಪ್ರಕೃತಿ, ದೇವಿ) ಪರಬ್ರಹ್ಮತತ್ತ್ವದ ಚಿತ್‌ಶಕ್ತಿರೂಪಳು. ತ್ರಿಗುಣ ಮೀರಿದವಳು(ನಿರ್ಗುಣಳು), ನಿತ್ಯಳು, ಸರ್ವವ್ಯಾಪಕಳು, ನಿರ್ವಿಕಾರಳು, ಮಂಗಳಕರಳು. ಪರಾಶಕ್ತಿ ಸ್ವರೂಪಿಣಿಯಾದ ದೇವಿಯು ಮಹಾಲಕ್ಷ್ಮಿಯಾಗಿ ಸತ್ವ ಗುಣ ಪ್ರಧಾನಳು. ಮಹಾಸರಸ್ವತಿಯಾಗಿ ರಜೋಗುಣ ಪ್ರಧಾನಳು. ಮಹಾಕಾಳಿಯಾಗಿ ತಮೋಗುಣ ಪ್ರಧಾನಳು. ಹೀಗೆ ಒಬ್ಬಳೇ ಆಗಿರುವ ದೇವಿಯು ಮೂರು ಸ್ತ್ರೀರೂಪಗಳಿಂದ ಪ್ರಕಟಳಾಗುತ್ತಾಳೆ. ಪ್ರಪಂಚದ ಸೃಷ್ಟಿಕಾರ್ಯಮಾಡಲು, ಶರೀರದಿಂದ ಪ್ರಕಟವಾಗುವುದೇ ಮೂಲಸೃಷ್ಟಿ (ಸರ್ಗ). ಲಕ್ಷ್ಮೀ, ಸರಸ್ವತಿ, ಕಾಳೀ ರೂಪಗಳಿಂದಲೇ ರಕ್ಷಣೆ, ಹುಟ್ಟು, ಸಾವುಗಳ ಕಾರ್ಯಗಳನ್ನು ಮಾಡಲು ವಿಷ್ಣು, ಬ್ರಹ್ಮ-ರುದ್ರ ಅವತಾರವೇ ಪ್ರತಿಸರ್ಗ (ಅನುಸೃಷ್ಟಿ).

ದೇವೀಭಾಗವತದಲ್ಲಿ ವಿಶ್ವಜನನಿಯಾದ ದೇವಿಯ ಆಶ್ಚರ್ಯಕರವಾದ ಹಾಗೂ ಪವಿತ್ರವಾದ ಲೀಲಾಕಾರ್ಯಗಳು ವಿಸ್ತಾರವಾಗಿ ವರ್ಣಿತವಾಗಿದೆ. ಇವುಗಳ ಶ್ರವಣ, ಮನನಗಳು ಎಲ್ಲರ ಪಾಪರಾಶಿಯನ್ನು ನಾಶಮಾಡಬಲ್ಲದು; ಎಲ್ಲಾ ಕಾಮನೆಗಳನ್ನೂ ಪೂರ್ಣಮಾಡಬಲ್ಲದು. ತ್ರಿಗುಣಾತೀತಳೂ, ಜ್ಞಾನಸ್ವರೂಪಳೂ, ಸಜ್ಜನಪ್ರಿಯಳೂ, ಸಮಾಧಿಯಲ್ಲಿ ತೋರುವವಳೂ ಆದ ದೇವಿ; ದೇವೀಭಾಗವತ ಶ್ರವಣದಿಂದ ಹೃದಯದಲ್ಲಿ ನೆಲೆಸುತ್ತಾಳೆ. ವೇದಸಾರಾಶ್ರಯವೂ, ಮುಮುಕ್ಷುಪ್ರಿಯವೂ ಆದ ದೇವೀಭಾಗವತವನ್ನು ರಚಿಸಿದ ವೇದವ್ಯಾಸರು, ಮೊತ್ತಮೊದಲು ತನ್ನ ಪುತ್ರ ಶುಕನಿಗೇ ಬೋಧಿಸಿದರು.

### ದೇವೀಭಾಗವತದಲ್ಲಿನ ದೇವೀ ಅವತಾರಗಳು ಹಾಗೂ ಭಕ್ತರು

ದುಷ್ಟರ ಸಂಹಾರ, ಸಜ್ಜನರ ರಕ್ಷಣೆ, ಜ್ಞಾನೋಪದೇಶಕ್ಕಾಗಿ ಭಗವಂತ ನಾನಾ ರೂಪಗಳಲ್ಲಿ ಕಾಣಿಸಿಕೊಳ್ಳುವುದೇ 'ಅವತಾರ' (ಕೆಳಕ್ಕೆ ಇಳಿದು ಬರುವುದು). ದೇವಿಯು ಮಧು-ಕೈಟಭರ ಸಂಹಾರಕ್ಕಾಗಿ ಮಹಾಕಾಳಿಯಾಗಿ, ಮಹಿಷಾಸುರನ ಸಂಹಾರಕ್ಕಾಗಿ ಮಹಾಲಕ್ಷ್ಮಿಯಾಗಿ, ಶುಂಭ-ನಿಶುಂಭರ ವಧೆಗಾಗಿ ಮಹಾಸರಸ್ವತಿಯಾಗಿ ಅವತರಿಸಿ ಇಂದ್ರಾದಿದೇವತೆಗಳನ್ನು ಸಂರಕ್ಷಿಸಿದ ಕಥೆ ವಿವರವಾಗಿ ಬಂದಿದೆ (ಸ್ಕಂಧ ೫). ಹಾಗೆಯೇ ಮಹಾದುರ್ಗೆಯಾಗಿ, ದುರ್ಗಾಸುರನನ್ನು ಸಂಹರಿಸುತ್ತಾಳೆ. ಶಾಕಂಭರಿ

ಯಾಗಿ ಬರಗಾಲದಲ್ಲಿ ನೀರು, ತರಕಾರಿ, ಧಾನ್ಯಗಳನ್ನು ಕರುಣಿಸಿ, ಭಕ್ತರ ಸಂರಕ್ಷಣೆ ಮಾಡುತ್ತಾಳೆ. ಭ್ರಮರಾಂಬಿಕೆಯಾಗಿ, ದುಂಬಿಗಳ ರೂಪದಿಂದ ಅರುಣಾಸುರನನ್ನು ಸಂಹರಿಸುತ್ತಾಳೆ. ಗೋಲೋಕದ ರಾಣಿ ರಾಧೆಯಾಗಿ, ವೇದಗಳ ತಾಯಿ ಸಾವಿತ್ರಿಯಾಗಿ (ಗಾಯತ್ರಿ), ಮಣಿದ್ವೀಪದ ರಾಣಿ ಭುವನೇಶ್ವರಿಯಾಗಿ ಕಾಣಿಸಿಕೊಂಡಿದ್ದಾಳೆ.

ಸ್ವಾಹಾದೇವೀ, ಸ್ವಧಾದೇವೀ, ದಕ್ಷಿಣಾದೇವೀ, ಷಷ್ಠೀದೇವೀ, ಮಂಗಳ ಚಂಡೀ ದೇವೀ, ಮನಸಾದೇವೀ, ಸುರಭೀದೇವೀ ಹೀಗೆ ದೇವಿಯ ನಾನಾರೂಪಗಳ ಉಪಾಖ್ಯಾನ, ಮಂತ್ರ , ಧ್ಯಾನ, ಪೂಜೆ, ಸ್ತೋತ್ರಗಳು ವಿಸ್ತಾರವಾಗಿ ಬಂದಿವೆ.

ಭಗವತಿಯ ಲೀಲೆಗಳ ವರ್ಣನೆಯೊಂದಿಗೆ, ಭಕ್ತರ ಕಥೆಗಳು (ಭಾಗವತರ) ವಿಸ್ತಾರವಾಗಿ ಬಂದಿದೆ. ಭಗವದ್ ಭಕ್ತನಾದವನು ಅಹಂಕಾರ ರಹಿತನೂ, ಗುರುವಾಕ್ಯವನ್ನು ಪಾಲಿಸುವವನೂ, ಎಲ್ಲೆಡೆ ಭಗವಂತನ ತತ್ತ್ವವನ್ನೇ ಕಾಣುತ್ತಾ, ಸದಾ ಭಗವಂತನಲ್ಲಿ ಅನುರಕ್ತನೂ ಆಗಿರುತ್ತಾನೆ. (**ಭ ಕಾರೋ ಭಗವದ್ ಭಕ್ತಃ, ಗಕಾರೋ ಗರ್ವವರ್ಜಿತಃ । ವ ಕಾರೋ ವಾಕ್ಯಪಾಲೀ ಚ, ತ ಕಾರೋ ತತ್ತ್ವದರ್ಶನಃ**) ಇಂತಹ ಅನೇಕ ದೇವೀಭಕ್ತರ ಕಥೆಗಳು ಈ ಪುರಾಣದಲ್ಲಿ ಬಂದಿವೆ. ದೇವಿಯ ಏಕಾಕ್ಷರ ಮಂತ್ರ(ಐಂ) ಉಚ್ಚರಿಸಿ ಸಿದ್ಧಿಪಡೆದ ಸತ್ಯವ್ರತ (ಉತಥ್ಯ) ಋಷಿಯ ಕಥೆ, ಕ್ಲೀಂ ಮಂತ್ರಾಕ್ಷರ ಜಪಿಸಿ ಸಿದ್ಧಿ ಪಡೆದ, ಸೂರ್ಯವಂಶದ ರಾಜಕುಮಾರ ಸುದರ್ಶನನ ಕಥೆ ದೇವಿಯನ್ನು ಪೂಜಿಸಿ ಸಂಪತ್ತನ್ನು ಪಡೆದ ಸುಶೀಲವೈಶ್ಯನ ಕಥೆ, ಮೂರನೇ ಸ್ಕಂಧದಲ್ಲಿ ವಿಸ್ತಾರವಾಗಿ ಬಂದಿದೆ. ದೇವಿಯ ಕೃಪೆಗೆ ಪಾತ್ರರಾಗಿದ್ದ ಔರ್ವಮುನಿಯ ವೃತ್ತಾಂತ, ಏಕವೀರ-ಏಕಾವಳಿಯರ ವೃತ್ತಾಂತ ಆರನೇ ಸ್ಕಂಧದಲ್ಲಿ ಬಂದಿದೆ. ವೈವಸ್ವತಮನು ಪುತ್ರ ಸುದ್ಯುಮ್ನ, ಹೆಣ್ಣಾಗಿ (ಇಳಾ) ಬದಲಾಗಿದ್ದ. ದೇವಿಯನ್ನು ಪೂಜಿಸಿ, ದೇವೀಭಾಗವತ ಕಥೆ ಕೇಳಿ ಶಾಶ್ವತಪುರುಷನಾದ ಕಥೆ ಇದೆ.

ದೇವೀಭಕ್ತರಾದ ಶಂತನುವಿನ ತಂದೆ ಪ್ರತೀಪ, ಪಾಂಡವರ ತಾಯಿ ಕುಂತಿ, ವ್ಯಾಸ ಶಿಷ್ಯ(ರೋಮಹರ್ಷನ ಪುತ್ರ) ಸೂತ ಪುರಾಣಿಕ, ಕೃಷ್ಣಬಲರಾಮ-ಸುಭದ್ರೆಯರ ತಂದೆ, ಯಾದವ ರಾಜಕುಮಾರ ವಾಸುದೇವ, – ಹೀಗೆ ಅನೇಕ ಭಕ್ತರ ಕಥೆಗಳು, ಭಕ್ತಿಯ ಉದ್ದೀಪನಕ್ಕೆ ಸಹಕಾರಿಗಳಾಗಿವೆ. ಈ ಎಲ್ಲಾ ದೇವಿಯ ಲೀಲೆಗಳು, ಭಕ್ತರ ಕಥೆಗಳು; ದೇವಿಯು 'ಕೆಟ್ಟದನ್ನು ನಾಶ ಮಾಡುತ್ತಾಳೆ, ಒಳ್ಳೆಯದನ್ನು ಪೋಷಿಸುತ್ತಾಳೆ' ಎಂಬುದನ್ನು ದೃಢವಾಗಿ ಸಾರುತ್ತವೆ.

### ಏಳನೇ ಸ್ಕಂಧದಲ್ಲಿನ 'ದೇವೀ ಗೀತೆ'

ದೇವತೆಗಳ ಸ್ತುತಿಗೆ ಒಲಿದ ದೇವಿ, ''ನಾನೇ ಹಿಮವಂತನ, ಮಗಳಾಗಿ ಜನಿಸಿ, ತಾರಕಾಸುರನನ್ನು ಸಂಹರಿಸುವ ಕುಮಾರನ



**ಹೈಮವತೀ ದೇವಿ**

ಜನನಕ್ಕೆ ಕಾರಣಳಾಗುತ್ತೇನೆ'' ಎಂದು ತಿಳಿಸುತ್ತಾಳೆ. ಪುಳಕಿತನಾದ ಹಿಮವಂತ, ''ಭಕ್ತ-ಜ್ಞಾನಗಳನ್ನು ಕರುಣಿಸು'' ಎಂದು ಬೇಡಿಕೊಳ್ಳುತ್ತಾನೆ. ಶ್ರೀದೇವಿಯು ಹಿಮವಂತರಾಜನಿಗೆ ಮಾಡಿದ ಉಪದೇಶವೇ 'ದೇವೀಗೀತೆ'. ವೇದಗಳು ಪ್ರತಿಪಾದಿಸುವ ಜ್ಞಾನೋಪದೇಶ, ಷಟ್‌ಚಕ್ರಧ್ಯಾನ, ಯಮ-ನಿಯಮಾದಿ ಅಷ್ಟಾಂಗಗಳು, ಓಂಕಾರ ಜಪ-ಎಲ್ಲವನ್ನೂ ವಿಸ್ತಾರವಾಗಿ ತಿಳಿಸಿದ್ದಾಳೆ. ಸಾರಭೂತವಾದ ಎರಡು ಉಪದೇಶಗಳು ಹೀಗಿವೆ:

**ನಾಹಂ ತೀರ್ಥೇ ನ ಕೈಲಾಸೇ, ವೈಕುಂಠೇ ವಾ ನ ಕರ್ಹಿಚಿತ್ ।**
**ವಸಾಮಿ ಕಿಂತು ಮಜ್ಞ್ನಾನಿ-ಹೃದಯಾಂಭೋದ ಮಧ್ಯಮೇ ॥**

*(೭.೩೬.೧೮)*

''ನಾನು ತೀರ್ಥಕ್ಷೇತ್ರದಲ್ಲಾಗಲೀ, ಕೈಲಾಸ, ವೈಕುಂಠದಲ್ಲಿಯಾಗಲೀ ಎಲ್ಲಿಯೂ ವಾಸಿಸುವುದಿಲ್ಲ. ಆದರೆ ಪರಬ್ರಹ್ಮ ಸ್ವರೂಪ ತಿಳಿದ ಜ್ಞಾನಿಯ ಹೃದಯಕಮಲಮಧ್ಯದಲ್ಲಿ ಸದಾ ಇರುತ್ತೇನೆ.''

**ಮತ್ಪೂಜಾ ಕೋಟಿಫಲದಂ, ಸಕೃನ್ಮಜ್ಞಾನಿನೋಽರ್ಚನಮ್ ।**
**ಕುಲಂ ಪವಿತ್ರಂ ತಸ್ಯಾಸ್ತಿ, ಜನನೀ ಕೃತಕೃತ್ಯತಾ ॥**

*(೭.೩೬.೧೯)*

‘‘ನನ್ನನ್ನು ತಿಳಿದ ಜ್ಞಾನಿಯನ್ನು ಗೌರವಿಸುವುದು, ನನ್ನ ಪೂಜೆಯ ಕೋಟಿಯಷ್ಟು ಫಲದಾಯಕ. ಜ್ಞಾನಿಯ ಸಂಗದಿಂದ ಆತನ ಕುಲವೂ ಪವಿತ್ರವಾಗುತ್ತದೆ. ತಾಯಿಯೂ ಸಾರ್ಥಕತೆಯನ್ನು ಪಡೆಯುತ್ತಾಳೆ.’’

ಬ್ರಹ್ಮವಿದ್ಯಾ ಉಪದೇಶದ ಬಳಿಕ ದೇವಿಯು; ಹಿಮವಂತನ ಪ್ರಾರ್ಥನೆಯಂತೆ, ತನ್ನ ಸನ್ನಿಧಾನವಿರುವ ಎಲ್ಲ ಕ್ಷೇತ್ರಗಳು, ೧೦೮ ದೇವಿಯ ನಾಮಗಳು, ತನ್ನನ್ನು ಆರಾಧಿಸುವ ವ್ರತಗಳು, ಪೂಜೆಯ ವಿಧಿವಿಧಾನಗಳು ಎಲ್ಲವನ್ನೂ ತಿಳಿಸುತ್ತಾಳೆ. ಈ ಎಲ್ಲಾ ವಿಷಯ ‘ದೇವಿಯ ಗೀತಾಶಾಸ್ತ್ರ’ ಎನಿಸಿದೆ.

ದೇವಿಯ ಪುರುಷರೂಪವೇ ವಿಷ್ಣುವಿನ ವಿವಿಧ ಅವತಾರಗಳು. ೮ನೇ ಸ್ಕಂಧದಲ್ಲಿ ಜಂಬೂದ್ವೀಪದಲ್ಲಿರುವ ವಿಷ್ಣುವಿನ ವಿವಿಧ ಅವತಾರಗಳ ಪೂಜೆಯ ವರ್ಣನೆ ಇದೆ.

## ಆಸ್ತಿಕರ ಸದಾಚಾರದ ಕೈಪಿಡಿ ದೇವೀಭಾಗವತ

ವೇದಕ್ಕೆ ವಿರುದ್ಧವಲ್ಲದ ಸದಾಚಾರಗಳು, ಧರ್ಮದ ಚರ್ಚೆ, ಕುಟುಂಬ, ಸಮಾಜ, ದೇಶದ ಸ್ವಾಸ್ಥ್ಯಕಾಪಾಡಿಕೊಳ್ಳಲು ಬೇಕಾದ ಹಲವು ವಿಚಾರಗಳು ಈ ಪುರಾಣದಲ್ಲಿವೆ. ಆಸ್ತಿಕರು ಧರಿಸಿಕೊಳ್ಳುವ ರುದ್ರಾಕ್ಷಿಮಣಿಯ ಮೂಲ, ಜಪಮಾಲೆ ಹಿಡಿದು ಮಾಡುವ ಜಪದ ಕ್ರಮ, ತ್ರಿಪುಂಡ್ರಧಾರಣೆಯ (ವಿಭೂತಿ ಧಾರಣೆ) ಮೌಲ್ಯ, ಪ್ರತಿಯೊಬ್ಬರೂ ಮಾಡಲೇ ಬೇಕಾದ ೫ ವಿಧದ ಯಜ್ಞಗಳು (ಪಿತೃ, ಅತಿಥಿ, ಭೂತ, ಜ್ಞಾನ(ಬ್ರಹ್ಮ), ದೇವ) ವೇದಮಾತೆಯಾದ ಗಾಯತ್ರೀಮಂತ್ರದ ಸಾರ, ೧೦೦೮ ಗಾಯತ್ರಿ ನಾಮಗಳು, ಋಷಿಗಳು, ದೇವತೆಗಳು, ಸಂಗೀತ ಮಾಪಕಗಳು, ಮುದ್ರೆಗಳು – ಹೀಗೆ ದೇವವೈಭವ, ಪುರಾಣದಲ್ಲಿ ವ್ಯಾಪಿಸಿದೆ. ವೈಕುಂಠ, ಗೋಲೋಕದ ಮೇಲಿರುವ ದೇವಿಯ ನಿವಾಸಸ್ಥಾನವಾದ, ಸರ್ವಶ್ರೇಷ್ಠ ಲೋಕವೆನಿಸಿದ ‘ಮಣಿದ್ವೀಪದ’ ಬಗ್ಗೆ ವಿವರ ಇದೆ. ನೂತನ ಗೃಹಪ್ರವೇಶದ ಸಂದರ್ಭದಲ್ಲಿ ‘ಮಣಿದ್ವೀಪದ’ ವರ್ಣನೆಯ ಭಾಗದ ಪಾರಾಯಣ, ವಾಸ್ತುದೇವತೆಗಳ ಸನ್ನಿಧಾನವನ್ನು ಹೆಚ್ಚಿಸುತ್ತದೆ ಎಂಬ ನಂಬಿಕೆ ಆಸ್ತಿಕರಲ್ಲಿದೆ.

## ದೇವೀ ಭಾಗವತದ ಮನನೀಯ ಶ್ಲೋಕಗಳು:

೧) **ಮಾನುಷ್ಯಂ ದುರ್ಲಭಂ ಪ್ರಾಪ್ಯ, ವೇದಶಾಸ್ತ್ರಾಣ್ಯಧೀತ್ಯ ಚ ।**
**ಬಧ್ಯತೇ ಯದಿ ಸಂಸಾರೇ, ಕೋ ವಿಮುಚ್ಯೇತ ಮಾನವಃ ॥**

‘‘ದುರ್ಲಭವಾದ ಮನುಷ್ಯ ಜನ್ಮಪಡೆದು, ವೇದ–ಶಾಸ್ತ್ರಗಳ ಅಧ್ಯಯನ ಮಾಡಿ ಸಂಸಾರ ಬಂಧನದಲ್ಲಿಯೇ ಬೀಳುವ ಮನುಷ್ಯನು, ಎಂದಿಗೂ ಮೋಕ್ಷ ಪಡೆಯಲಾರ.’’

೨) **ಗೃಹಸ್ಥಾಶ್ರಮ ಸಂಸ್ಥೋಽಪಿ, ಶಾಂತಃ ಸುಮತಿರಾತ್ಮವಾನ್ ।**
**ನ ಚ ಹೃಷ್ಯೇತ್, ನ ಚ ತಪೇತ್ ಲಾಭಾಲಾಭೇ ಸಮೋ ಭವೇತ್ ॥**

ಗೃಹಸ್ಥಾಶ್ರಮದಲ್ಲಿದ್ದರೂ; ಶಾಂತನೂ, ಸದ್ಬುದ್ಧಿಯುಳ್ಳವನೂ, ಜಿತೇಂದ್ರಿಯನೂ ಆದವನು ಸುಖ–ದುಃಖಗಳಲ್ಲಿ, ಲಾಭ–ನಷ್ಟಗಳಲ್ಲಿ ಸಮಾನವಾದ ದೃಷ್ಟಿಯುಳ್ಳವನಾಗಿರುತ್ತಾನೆ.

೩) **ಯಃ ಶಿವೋ ನಾಮರೂಪಾಭ್ಯಾಂ, ಯಾ ದೇವೀ ಸರ್ವಮಂಗಲಾ ।**
**ತಯೋಃ ಸಂಸ್ಮರಣಾತ್ ನಿತ್ಯಂ, ಸರ್ವತ್ರ ಜಯಮಂಗಲಮ್ ।**

ನಾಮ, ರೂಪಗಳಿಂದ ಶಿವ, ಶಿವೆ ಎಂದು ಕರೆಯಲ್ಪಡುವ, ಸರ್ವಮಂಗಳ ಸ್ವರೂಪಿಣಿಯಾದ ದೇವಿಯನ್ನು ಸ್ಮರಿಸುವವರಿಗೆ, ಎಲ್ಲೆಡೆ ಜಯ ಹಾಗೂ ಮಂಗಳ ಸಿದ್ಧಿಸುತ್ತದೆ. ದೇವಿಯು ಮಂಗಳವನ್ನು ಕರುಣಿಸಲೆಂದು ಪ್ರಾರ್ಥಿಸೋಣ. ✽

*ಉಪನಿಷತ್ತಿನ ಸಂದೇಶ*

## ‘ಈಶಾ ವಾಸ್ಯಮಿದಂ ಸರ್ವಂ.. ’

**ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್ ॥**

‘ಈ ಜಗತ್ತಿನಲ್ಲಿ ಚಲನಾತ್ಮಕವಾದುವು ಏನೇನು ಇವೆಯೋ ಅವೆಲ್ಲವನ್ನೂ ಈಶನಿಂದ ಮುಚ್ಚಬೇಕು. ಅದರ ತ್ಯಾಗದಿಂದ ನಿನ್ನನ್ನು ನೀನು ಕಾಪಾಡಿಕೋ. ಯಾರ ಧನವನ್ನೂ ಬಯಸಬೇಡ.’

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ ।**
**ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥**

‘ಈ ಲೋಕದಲ್ಲಿ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು. ಹೀಗಿರುವ ಮನುಷ್ಯನಿಗೆ ಕರ್ಮವು ಅಂಟಿಕೊಳ್ಳದೆ ಇರಲು ಬೇರೆ ಉಪಾಯವಿಲ್ಲ.’

**ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥**

‘ಯಾವನು ಎಲ್ಲ ಪ್ರಾಣಿಗಳನ್ನೂ ತನ್ನ ಆತ್ಮದಲ್ಲೇ ನೋಡುವನೋ, ಮತ್ತು ತನ್ನ ಆತ್ಮವನ್ನು ಸರ್ವ ಪ್ರಾಣಿಗಳಲ್ಲಿ ನೋಡುವನೋ, ಅವನು ಜುಗುಪ್ಸೆಯನ್ನು ಹೊಂದುವುದಿಲ್ಲ.’

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।**
**ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**

‘ಹೇ ಪೂಷನ್ (ಸೂರ್ಯನೆ), ಜ್ಯೋತಿರ್ಮಯವಾದ ಮುಚ್ಚಳದಿಂದ ಸತ್ಯದ ಮುಖವು ಮುಚ್ಚಲ್ಪಟ್ಟಿದೆ. ಸತ್ಯ ಧರ್ಮನಾದ ನನಗೆ ಅದು ಕಾಣುವಂತೆ, ಮುಚ್ಚಳವನ್ನು ತೆಗೆದು ಹಾಕು.’ *(ಈಶಾವಾಸ್ಯೋಪನಿಷತ್ತು – ೧,೨, ೬,೧೫)*